ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ
BENGALURU CENTRAL UNIVERSITY
Central College Campus, Dr. B.R. AmbedkarVeedhi, Bengaluru – 560 001.
Ph. No.: 080 – 22131385, E-Mail:registrarbcu@gmail.com / bcuccb@gmail.com

ಸಂಖ್ಯೆ: ಬಿಸಿಯು/ ವಿವಿಪ/ಸಾ.ಸಭೆ-2/ 29 /2019-20 ದಿನಾಂಕ 12.11.2019.

ಗೆ,

ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು,
ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ,
ಬೆಂಗಳೂರು

ಮಾನ್ಯರೆ

**ವಿಷಯ: ದಿನಾಂಕ: 22.10.2019 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ 2 ನೇ ಸಭೆಯ ನಡಾವಳಿಗಳು.**

***

ದಿನಾಂಕ: 22.10.2019 ರಂದು ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು–560 001 ರಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ತಿನ 2 ನೇ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 4.18 ರನ್ವಯ ಕಳುಹಿಸುತ್ತಿದ್ದೇನೆ.

ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಹದಿನಾಲ್ಕು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು 12/11/19

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು–1.
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ,
4. ಕಛೇರಿ ಪ್ರತಿ / ರಕ್ಷಣಾ ಕಡತ

ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ
BENGALURU CENTRAL UNIVERSITY
Central College Campus, Dr. B.R. AmbedkarVeedhi, Bengaluru – 560 001.
Ph. No.: 080 – 22131385, E-Mail:registrarbcu@gmail.com / bcuccb@gmail.com

ಸಂಖ್ಯೆ: ಬಿಸಿಯು/ಎಸ್‌ವೈಎನ್/ವಿವಿಪ-2/ ೨೧ /2019-20 ದಿನಾಂಕ: **12.11.2019.**

ದಿನಾಂಕ 22.10.2019 ರಂದು ಪೂರ್ವಾಹ್ನ 11.00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆರಸ್ತೆ, ಬೆಂಗಳೂರು – 560 001 ಇಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ತಿನ 2 ನೇ ಸಭೆಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ: ಎಸ್. ಜಾಫೆಟ್<br>ಕುಲಪತಿಗಳು | ಸಭಾಧ್ಯಕ್ಷರು |
| 2. | ಡಾ. ಆರ್.ಕೆ. ರಮೇಶ್ ಬಾಬು<br>ಜಂಟಿ ನಿರ್ದೇಶಕರು<br>ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಪರವಾಗಿ | ಸದಸ್ಯರು. |
| 3. | ಡಾ. ಶಾಂತಿ ರಾಜೇಂದ್ರಕುಮಾರ್ | ಸದಸ್ಯರು |
| 4. | ಡಾ. ಎಸ್. ಹರೀಶ್ | ಸದಸ್ಯರು |
| 5. | ಡಾ. ಆಶಾ ಗಣೇಶ್ | ಸದಸ್ಯರು |
| 6. | ಡಾ. ಲತಾಕುಮಾರಿ | ಸದಸ್ಯರು |
| 7. | ಡಾ: ಬಿ.ಎ. ಅನುರಾಧಾ | ಸದಸ್ಯರು |
| 8. | ಡಾ. ಆರ್. ಪಾರ್ವತಿ | ಸದಸ್ಯರು |
| 9. | ಡಾ. ಇ.ಬಿ. ರಾಜೇಶ್ | ಸದಸ್ಯರು |
| 10. | ಶ್ರೀ. ಡಿ.ಜಿ. ಶ್ರೀನಿವಾಸಮೂರ್ತಿ | ಸದಸ್ಯರು |
| 11. | ಪ್ರೊ. ಕೆ. ರಮೇಶ್ | ಸದಸ್ಯರು |
| 12. | ಪ್ರೊ. ಕೆ.ಎನ್. ಗೋದಾಮಣಿ | ಸದಸ್ಯರು |
| 13. | ಡಾ. ಅನುಪಮಾ ಎಸ್.ಬಿ. | ಸದಸ್ಯರು |
| 14. | ಡಾ. ಬಿ.ಎನ್. ಉಮೇಶ್ | ಸದಸ್ಯರು |
| 15. | ಡಾ. ವಿ.ಆರ್.ದೇವರಾಜು | ಸದಸ್ಯರು |
| 16. | ಡಾ. ವಿ. ಗಾಯತ್ರಿ | ಸದಸ್ಯರು |
| 17. | ಡಾ. ಎಸ್. ಹರಿಪ್ರಸಾದ್ | ಸದಸ್ಯರು |

18. ಡಾ. ಪಿ. ಆರ್ ಚೇತನ ಸದಸ್ಯರು

19. ಡಾ. ಎಮ್. ಮುನಿನಾರಾಯಣಪ್ಪ ಸದಸ್ಯರು

20. ಡಾ. ಎನ್. ನರಸಿಂಹಮೂರ್ತಿ ಸದಸ್ಯರು

21. ಡಾ. ಎಮ್. ಮುನಿರಾಜು ಸದಸ್ಯರು

22. ಡಾ. ಎಮ್. ಪಾಂಡುರಂಗಪ್ಪ ಸದಸ್ಯರು

23. ಕುಲಸಚಿವರು (ಮೌಲ್ಯಮಾಪನ) ಸದಸ್ಯರು

24. ಕುಲಸಚಿವರು ಸದಸ್ಯ ಕಾರ್ಯದರ್ಶಿಗಳು

ಸಭೆಯ ಪ್ರಾರಂಭದಲ್ಲಿ, ಸೆಂಟ್ರಲ್ ಕಾಲೇಜಿನ ಹಿಂದಿನ ಪ್ರಾಂಶುಪಾಲರು ಹಾಗೂ ಗುಲಬರ್ಗಾ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾಗಿದ್ದ ಡಾ. ಎನ್ ರುದ್ರಯ್ಯನವರು ನಿಧನಕ್ಕೆ ಮೃತರ ಆತ್ಮಕ್ಕೆ ಗೌರವ ಸೂಚಿಸಿ ಎರಡು ನಿಮಿಷಗಳ ಮೌನ ಆಚರಿಸಲಾಯಿತು.

ಕುಲಸಚಿವರು ಸಭೆಗೆ ಆಗಮಿಸಿದ ಎಲ್ಲಾ ಗೌರವನ್ವಿತ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿದರು. ಕುಲಸಚಿವರಾಗಿ ಅಧಿಕಾರ ವಹಿಸಿಕೊಂಡ ನಂತರ ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ಭಾಗವಹಿಸುತ್ತಿರುವ ಡಾ. ಕೆ. ಶಿವರಾಂ ರವರಿಗೆ ಸಭೆ ಅಭಿನಂದನೆಗಳನ್ನು ಸಲ್ಲಿಸಿತು. ಕುಲಪತಿಗಳು ಸದಸ್ಯರಿಗೆ ಮತ್ತೊಮ್ಮೆ ಸ್ವಾಗತಿಸುತ್ತಾ ವಿಶ್ವವಿದ್ಯಾಲಯದಲ್ಲಿ ಜರುಗಿದ ಕೆಲವು ಶೈಕ್ಷಣಿಕ ಚಟುವಟಿಕೆಗಳು ಕುರಿತು ವಿವರಗಳನ್ನು ನೀಡಿದರು. ಕಳೆದ ವರ್ಷ ಕಲಾ ನಿಕಾಯದಲ್ಲಿ 8 ಸ್ನಾತಕೋತ್ತರ ವ್ಯಾಸಂಗಗಳನ್ನು ಪ್ರಾರಂಭಿಸಿದ್ದು, ಈ ವರ್ಷ ವಿಜ್ಞಾನ ನಿಕಾಯದಲ್ಲಿ ಎಂ.ಎಸ್ಸಿ ಭೌತ್ತಶಾಸ್ತ್ರ, ಸಸ್ಯ ವಿಜ್ಞಾನ ಹಾಗೂ ಪ್ರಾಣಿ ವಿಜ್ಞಾನ ವ್ಯಾಸಂಗಗಳನ್ನು ಪ್ರಾರಂಭಿಸಲಾಗಿದೆ. ಹೀಗಾಗಿ ಸೆಂಟ್ರಲ್ ಕಾಲೇಜು ಆವರಣದಲ್ಲಿ ವಿಜ್ಞಾನ ನಿಕಾಯದ ಪ್ರಮುಖ ವಿಷಯಗಳ ಬೋಧನೆಗೆ ಅವಕಾಶ ಕಲ್ಪಿಸಿದಂತಾಗಿದೆ ಎಂದು ತಿಳಿಸಿದರು. 1919 ರಲ್ಲಿ ಅಂದಿನ ಸೆಂಟ್ರಲ್ ಕಾಲೇಜ್‌ನಲ್ಲಿ ಸಸ್ಯಶಾಸ್ತ್ರ ವಿಭಾಗ ಪ್ರಾರಂಭವಾಗಿರುವುದರಿಂದ ಅದರ ಶತಮಾನೋತ್ಸವವನ್ನು ಆ ವಿಭಾಗದ ಹಳೆಯ ವಿದ್ಯಾರ್ಥಿಗಳ ಟ್ರಸ್ಟ್ ಸಹಯೋಗದೊಂದಿಗೆ ಆಚರಿಸಲಾಯಿತು. ಸದರಿ ವಿಭಾಗದ ಹಿಂದಿನ ವಿದ್ಯಾರ್ಥಿ ಹಾಗೂ ಬಯೋಕಾನ್ ಸಂಸ್ಥೆಯ ಮುಖ್ಯಸ್ಥರಾಗಿರುವ ಡಾ. ಕಿರಣ್ ಮಜುಂದಾರ ಶಹಾ ರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು ಎಂದು ತಿಳಿಸಿದರು. ನಂತರ ಕಾರ್ಯ ಸೂಚಿಯನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು.

ವಿಷಯ ಸಂಖ್ಯೆ-1 ದಿನಾಂಕ 07.02.2019; 28.05.2019 ಹಾಗೂ 01.07.2019 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಗಳ ನಡಾವಳಿಗಳನ್ನು ಧೃಢೀಕರಿಸುವ ಕುರಿತು.

ನಿರ್ಣಯ: **ಕುರಿತು ದಿನಾಂಕ 07.02.2019; 28.05.2019 ಹಾಗೂ 01.07.2019 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಗಳ ನಡಾವಳಿಗಳನ್ನು ಧೃಢೀಕರಿಸಲಾಯಿತು.**

ವಿಷಯ ಸಂಖ್ಯೆ-2 ದಿನಾಂಕ 07.02.2019; 28.05.2019 ಹಾಗೂ 01.07.2019 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಗಳ ನಡಾವಳಿಗಳ ಮೇಲೆ ಕೈಕೊಂಡ ಕ್ರಮಗಳ ವರದಿಯ ಪರಿಶೀಲನೆ ಹಾಗೂ ಅನುಮೋದನೆ ಕುರಿತು.

ಕೆಳಗೆ ನಮೂದಿಸಿದ ಅಭಿಪ್ರಾಯಗಳನ್ನು ಸದಸ್ಯರು ಸಭೆಯಲ್ಲಿ ಪ್ರಸ್ತಾಪಿಸಿದರು

ದಿನಾಂಕ 07.02.2019 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಗಳ ನಡಾವಳಿಗಳ ಮೇಲೆ ಕೈಕೊಂಡ ಕ್ರಮಗಳ ವರದಿ:

1. ಸದಸ್ಯರಾದ ಡಾ. ಆರ್. ಪಾರ್ವತಿ ರವರು ಪಿ.ಹೆಚ್.ಡಿ ಪ್ರವೇಶಕ್ಕಾಗಿ ಅರ್ಜಿಗಳನ್ನು ಕರೆದು ಪ್ರವೇಶ ಪರೀಕ್ಷೆ ಜರುಗಿಸಿ, ಪರೀಕ್ಷೆಯ ಫಲಿತಾಂಶಗಳನ್ನು ಕೂಡ ಪ್ರಕಟಿಸಲಾಗಿದೆ ಆದರೆ ಪ್ರವೇಶಗಳನ್ನು ಅಂತಿಮಗೊಳಿಸಿರುವದಿಲ್ಲ ಇದರಿಂದಾಗಿ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ ಎಂದು ತಿಳಿಸಿದರು.

ಕುಲಪತಿಗಳು ಈ ಕುರಿತು ಸಂಬಂಧಪಟ್ಟ ಡೀನರು ಹಾಗೂ ಕುಲಸಚಿವರು (ಮೌಲ್ಯಮಾಪನ) ರವರು ಕೂಡಲೇ ಕ್ರಮ ಕೈಕೊಳ್ಳಬೇಕೆಂದು ಸೂಚಿಸಿದರು

ದಿನಾಂಕ 28.05.2019 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಗಳ ನಡಾವಳಿಗಳ ಮೇಲೆ ಕೈಕೊಂಡ ಕ್ರಮಗಳ ವರದಿ:

2. ಪ್ರಿನ್ಸಿಪಾಲರಾದ ಡಾ. ಆರ್. ಪಾರ್ವತಿ, ಡಾ. ಲತಾಕುಮಾರಿ, ಡಾ. ಬಿ.ಎ ಅನುರಾಧ, ಡಾ. ಆಶಾ ಗಣೇಶ್, ಡಾ. ಶಾಂತಿ ರಾಜೇಂದ್ರಕುಮಾರ್, ಶ್ರೀ ಡಿ.ಜಿ. ಶ್ರೀನಿವಾಸಮೂರ್ತಿ, ಪ್ರೊ. ಕೆ. ರಮೇಶ್ ಹಾಗೂ ಡಾ: ರಾಜೇಶ್ ರವರು ಹೊಸ ಕಾಲೇಜು/ವಿಷಯ/ಕೋರ್ಸುಗಳ ಸಂಯೋಜನೆ ಕುರಿತು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಗೆ ಇದುವರೆಗೆ ಅನುಮೋದನೆ ದೊರೆತಿರುವುದಿಲ್ಲ. ನವೆಂಬರ್ ತಿಂಗಳಲ್ಲಿ ಪರೀಕ್ಷೆಗಳ ಪ್ರಾರಂಭವಾಗಲಿದ್ದು ವಿದ್ಯಾರ್ಥಿಗಳ ಹಾಗೂ ಪ್ರಿನ್ಸಿಪಾಲರು ಆತಂಕದಲ್ಲಿದ್ದಾರೆ ಎಂದು ತಿಳಿಸಿ ಈ ಕುರಿತು ವಿಶ್ವವಿದ್ಯಾಲಯ ಒಂದು ತೀರ್ಮಾನ ಕೈಕೊಳ್ಳಬೇಕೆಂದು ವಿನಂತಿಸಿದರು

ಕುಲಪತಿಗಳು ಪ್ರಿನ್ಸಿಪಾಲರ ಸಂವೇದನೆಗೆ ಸ್ಪಂದಿಸಿ, ಈ ಆತಂಕವನ್ನು ಮನಗಂಡು ಈಗಾಗಲೇ ಸರ್ಕಾರಕ್ಕೆ ಹಲವಾರು ಬಾರಿ ವಿನಂತಿ ಮಾಡಿಕೊಳ್ಳಲಾಗಿದೆ. ಸರ್ಕಾರ ಅನುಮೋದನೆ ನೀಡುವಲ್ಲಿ ವಿಳಂಬವಾಗಿದೆ. ಶಾಶ್ವತ ಸಂಯೋಜನೆ ಮುಂದುವರಿಕೆ ಪ್ರಕರಣಗಳಲ್ಲಿ ಸಹ ಸರ್ಕಾರದ ಅನುಮೋದನೆ ಬಾರದಿರುವುದರಿಂದ, ಕಳೆದ ಸಿಂಡಿಕೇಟ್ ಸಭೆಯಲ್ಲಿ ಈ ಕಾಲೇಜುಗಳಿಗೆ ಈಗಾಗಲೇ ಅನುಮೋದಿಸಿರುವ ವಿಷಯಗಳಿಗೆ ಮಾತ್ರ ಸರ್ಕಾರದ ಅನುಮೋದನೆ ನಿರೀಕ್ಷಿಸಿ, ಮಹಾವಿದ್ಯಾಲಯಗಳಿಂದ ಮುಚ್ಚಳಿಕೆ ಪಡೆದು ವಿದ್ಯಾರ್ಥಿಗಳ ಪ್ರವೇಶವನ್ನು ತಾತ್ಕಾಲಿಕವಾಗಿ ಮಾನ್ಯ ಮಾಡಲು ತೀರ್ಮಾನ ಕೈಕೊಳ್ಳಲಾಗಿದೆ. ಇದನ್ನು ಹೊರತುಪಡಿಸಿ ಬೇರೆ ಸಂಯೋಜನೆ ಸಂಬಂಧಿಸಿದ ವಿಷಯಗಳ ಕುರಿತು ಯಾವುದೇ ನಿರ್ಧಾರವನ್ನು ವಿಶ್ವವಿದ್ಯಾಲಯ ತೆಗೆದುಕೊಳ್ಳಲು ಸಾಧ್ಯವಿಲ್ಲವೆಂದು ತಿಳಿಸಿದರು.

3. ಸಂಯೋಜನಾ ಅಧಿಸೂಚನೆ ಹೊರಡಿಸುವ ಕುರಿತು ಪ್ರಿನ್ಸಿಪಾಲರುಗಳು ಪ್ರಸ್ತಾವನೆಗೆ ಕುಲಪತಿಗಳು ಈ ಕುರಿತು ಸರ್ಕಾರ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಅನ್ವಯವಾಗುವಂತೆ, ಏಕರೂಪದ ಆನ್‌ಲೈನ್ ಸಂಯೋಜನಾ ಅರ್ಜಿ ಸಲ್ಲಿಕೆಯ ತತ್ರಾಂಶ ಹಾಗೂ ಪರಿನಿಯಮಗಳನ್ನು ಸಿದ್ಧಪಡಿಸಲು ಸಮಿತಿ ರಚಿಸಿದೆ. ತಾವು ಕೂಡ ಈ ಸಮಿತಿಯ ಸದಸ್ಯರಾಗಿದ್ದು ನಮ್ಮ ವಿಶ್ವವಿದ್ಯಾಲಯ ಕಳೆದ ವರ್ಷ ಸಿದ್ಧಪಡಿಸಿದ ತತ್ರಾಂಶದಲ್ಲಿ ಕೆಲವು ಬರವಣಿಗೆಗಳೊಂದಿಗೆ ಕಾರ್ಯರೂಪದಲ್ಲಿ ತರುವ ಸಾಧ್ಯತೆ ಇದೆ ಎಂದು ತಿಳಿಸಿದರು. ಈ ಕುರಿತು ಸರ್ಕಾರದ ಮಟ್ಟದಲ್ಲಿ ಬೆಳವಣಿಗೆಗಳನ್ನು ಗಮನಿಸಿ ಅಧಿಸೂಚನೆ ಹೊರಡಿಸಲು ಕ್ರಮ ಕೈಕೊಳ್ಳಲಾಗುವುದು ಎಂದು ತಿಳಿಸಿದರು

ದಿನಾಂಕ 01.07.2019 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಗಳ ನಡಾವಳಿಗಳ ಮೇಲೆ ಕೈಕೊಂಡ ಕ್ರಮಗಳ ವರದಿ:

4. ಶಿಷ್ಯವೇತನ ಕುರಿತಂತೆ, ಬಿ.ಎಡ್ ಕಾಲೇಜುಗಳ ಪೋರ್ಟಲ್ ಕಂಪ್ಯೂಟರನಲ್ಲಿ ಬರುತ್ತಿಲ್ಲವೆಂದು ಸದಸ್ಯರಾದ ಡಾ: ಆರ್. ಪಾರ್ವತಿಯವರು ತಿಳಿಸಿದರು. ಕುಲಪತಿಗಳು ಅಧಿಕಾರಿಗಳನ್ನು ಸಭೆಗೆ ಕರೆಸಿ ವಿವರಗಳನ್ನು ಒದಗಿಸಿದರು.

5. ಸದಸ್ಯರಾದ ಡಾ. ಎನ್. ನರಸಿಂಹಮೂರ್ತಿಯವರು ಮಹಾವಿದ್ಯಾಲಯಗಳ ಸಂಯೋಜನಾ ಕುರಿತಂತೆ ಕಳೆದ ಸಭೆಯಲ್ಲಿ ಕೆಲವು ಮಹಾವಿದ್ಯಾಲಯಗಳ ಸಂಯೋಜನೆಯನ್ನು ರದ್ದುಪಡಿಸಲು ಕ್ರಮ ಕೈಕೊಳ್ಳಬೇಕೆಂದು ಶಿಫಾರಸ್ಸು ಮಾಡಲಾಗಿತ್ತು. ಈ ಕುರಿತು ಕೈಕೊಂಡ ಕ್ರಮಗಳ ಮಾಹಿತಿ ಕೇಳಿದರು. ಸದಸ್ಯರಾದ ಡಾ. ಬಿ.ಎ. ಅನುರಾಧ, ಡಾ. ಮುನಿರಾಜು ಹಾಗೂ ಇತರರು, ಈ ಕುರಿತು ವಿಶ್ವವಿದ್ಯಾಲಯ ಸಂಬಂಧಿಸಿದ ಮಹಾವಿದ್ಯಾಲಯಗಳಿಗೆ ಕಾರಣ ಕೇಳಿ ನೋಟೀಸು ಜಾರಿ ಮಾಡಿ, ನಿಯಾಮಾವಳಿಗಳಂತೆ ಸಂಯೋಜನೆ ಹಿಂಪಡೆಯಲು ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕಾಗುತ್ತದೆ ಎಂದು ತಿಳಿಸಿದರು. ಕುಲಪತಿಗಳು ಈ ಕುರಿತು ವಿಶ್ವವಿದ್ಯಾಲಯದ ಅಧಿನಿಯಮದ ಪ್ರಕಾರ, ಅಗತ್ಯ ಕ್ರಮ ಕೈಕೊಳ್ಳಲು ಕುಲಸಚಿವರಿಗೆ ಸೂಚಿಸಿದರು.

6. ಸದಸ್ಯರಾದ ಡಾ. ಎನ್. ನರಸಿಂಹಮೂರ್ತಿಯವರು ದಿನಾಂಕ 1.7.2019 ರ ವಿದ್ಯಾವಿಷಯಕ ಪರಿಷತ್ ಸಭೆಯ ತೀರ್ಮಾನದ ಪ್ರಕಾರ ಪ.ಜಾ/ಪ.ಪಂ/ಹಿಂದುಳಿದ ವರ್ಗ/ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಲಭ್ಯವಿರುವ ವಿದ್ಯಾರ್ಥಿವೇತನ ಹಾಗೂ ಇತರ ಯೋಜನೆಗಳ ಕುರಿತು ರಚಿಸಲಾದ ಸಮಿತಿ ಕೈಕೊಂಡ ಕ್ರಮಗಳ ಕುರಿತು ಮಾಹಿತಿ ಕೋರಿದರು ಹಾಗೂ ಇಂತಹ ಸಮಿತಿಗಳಿಗೆ ಡೀನರು ಅಧ್ಯಕ್ಷರಾಗಿರಬೇಕೆಂದು ತಿಳಿಸಿದರು. ಸದಸ್ಯರಾದ ಡಾ: ಕೆ. ರಮೇಶ್‌ರವರು ಈ ಸಮಿತಿಯಲ್ಲಿ ತಮ್ಮ ಹೆಸರು ಸೇರ ಬೇಕಾಗಿತ್ತು ಆದರೆ ಡಾ. ಇ.ಬಿ.ರಾಜೇಶ್ ರವರ ಹೆಸರು ಸೇರಿಸಲಾಗಿದೆ ಎಂದು ತಿಳಿಸಿದರು

ಕುಲಪತಿಗಳು ವಿವರಣೆ ನೀಡಿ ಸಮಿತಿಯ ಸಂಚಾಲಕರು, ಪ.ಜಾ /ಪ.ಪಂ / ಹಿಂದುಳಿದ ವರ್ಗ/ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಸರ್ಕಾರದ ಇಲಾಖೆಗಳಲ್ಲಿ ಇರುವ ವಿವಿಧ ಯೋಜನೆಗಳ ಕುರಿತು ಮಾಹಿತಿ ಸಂಗ್ರಹ ಮಾಡಿದ್ದು, ಅದನ್ನು ಸಮಿತಿಯ ಅಧ್ಯಕ್ಷರಿಗೆ ಸಲ್ಲಿಸಿದ್ದಾರೆ ಎಂದು ತಿಳಿಸಿದರು. ಸದಸ್ಯರು ಪ್ರಸ್ತಾಪಿಸಿದಂತೆ, ಸಮಿತಿಯಲ್ಲಿ ಡಾ. ಕೆ ರಮೇಶ್ ರವರನ್ನು ಸದಸ್ಯರಾಗಿ ನೇಮಕ ಮಾಡಲು ಸಭೆ ಅನುಮೋದನೆ ನೀಡಿತು.

7. ಬಿ.ಕಾಂ ಸ್ನಾತಕ ಪಠ್ಯಕ್ರಮ ಕುರಿತು ಸದಸ್ಯರಾದ ಡಾ. ಎಂ. ಮುನಿನಾರಾಯಣಪ್ಪರವರು ಕ್ರೆಡಿಟ್‌ಗಳ ಕುರಿತು ಕೆಲವು ಮಾಹಿತಿ ಕೋರಿದರು ಹಾಗೂ ಕಳೆದ ಸಭೆಯಲ್ಲಿ ತೀರ್ಮಾನಿಸಿದಂತೆ ಪಠ್ಯಕ್ರಮವನ್ನು ಪರಿಶೀಲಿಸುವ ಕುರಿತು ರಚಿಸಲಾಗಿರುವ ಸಮಿತಿ ಕೈಕೊಂಡ ಕ್ರಮದ ಮಾಹಿತಿ ಕೋರಿದರು. ಅಧ್ಯಯನ ಮಂಡಳಿ ಅಧ್ಯಕ್ಷರಾದ ಡಾ. ಎಂ. ಮುನಿರಾಜು ಹಾಗೂ ಸದರಿ ಸಮಿತಿಯ ಸದಸ್ಯರಾದ ಡಾ. ಬಿ.ಎ. ಅನುರಾಧ ರವರು ಚರ್ಚೆಯಲ್ಲಿ ಪಾಲ್ಗೊಂಡು ಸಮಿತಿ ಸಭೆ ಸೇರಿ ಪಠ್ಯಕ್ರಮವನ್ನು ಪರಿಶೀಲಿಸಿ, ಯು.ಜಿ.ಸಿ ನಿಯಮಾವಳಿಗಳಂತೆ ಕ್ರೆಡಿಟ್‌ಗಳನ್ನು ನಿಗಡಿಪಡಿಸಿ ಜಾರಿಗೊಳಿಸಲಾಗಿದೆ ಎಂದು ತಿಳಿಸಿದರು. ಸದಸ್ಯರಾದ ಡಾ. ಎನ್. ನರಸಿಂಹಮೂರ್ತಿಯವರು ಕ್ರೆಡಿಟ್‌ಗಳಿಗೆ ಕೊಡುವ ಪ್ರಾಮುಖ್ಯತೆಯುನ್ನು CGP ಗಳಿಗೂ ಕೊಡಬೇಕೆಂದು ತಿಳಿಸಿದರು.

**ನಿರ್ಣಯ:** **ಮೇಲಿನ ಸೂಚನೆ / ತೀರ್ಮಾನದೊಂದಿಗೆ ದಿನಾಂಕ 07.02.2019; 28.05.2019 ಹಾಗೂ 01.07.2019 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಗಳ ನಡಾವಳಿಗಳ ಮೇಲೆ ಕೈಕೊಂಡ ಕ್ರಮಗಳ ವರದಿಯನ್ನು ಪರಿಶೀಲಿಸಿ ಅನುಮೋದಿಸಲಾಯಿತು.**

ವಿಷಯ ಸಂಖ್ಯೆ-3 ಎಂ.ಎಸ್ಸಿ ಭೌತಶಾಸ್ತ್ರ ವ್ಯಾಸಂಗದ ಪ್ರಥಮ ಹಾಗೂ ದ್ವಿತೀಯ ಸೆಮಿಸ್ಟರ್ ಪಠ್ಯಕ್ರಮವನ್ನು 2019-20 ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಿರುವ ಕ್ರಮದ ಘಟನೋತ್ತರ ಅನುಮೋದನೆ ಕುರಿತು

ಸದಸ್ಯರಾದ ಪ್ರೊ ಕೆ. ಎನ್ ಗೋದಾಮಣಿಯವರು ಕ್ರೆಡಿಟ್‌ಗಳ ಕುರಿತು ಕೋರಲಾದ ಮಾಹಿತಿಯನ್ನು ವಿಜ್ಞಾನ ನಿಕಾಯದ ಡೀನರಾದ ಪ್ರೊ. ಪಾಂಡುರಂಗಪ್ಪನವರು ನೀಡಿದರು. ಪಠ್ಯಕ್ರಮದ ಜೊತೆಗೆ, Scheme of Examination, ಮಾದರಿ ಪ್ರಶ್ನೆ ಪತ್ರಿಕೆ, ಅಂತರಿಕ ಅಂಕಗಳ ವರ್ಗೀಕರಣ ನೀಡದಿರುವ ಕುರಿತು ಹಿರಿಯ ಸದಸ್ಯರಾದ ಪ್ರೊ. ಕೆ. ಎನ್. ಗೋದಾಮಣಿಯವರು ತಿಳಿಸಿದರು.

ಸಭಾಧ್ಯಕ್ಷರು ಇದಕ್ಕೆ ಸಂಬಂಧಿಸಿದಂತೆ ವಿವರಣೆ ನೀಡುತ್ತಾ, ವಿಶ್ವವಿದ್ಯಾಲಯ ಹೊಸದಾಗಿ ವಿಭಾಗಗಳನ್ನು ಪ್ರಾರಂಭ ಮಾಡಿದ್ದು, ಈ ವಿಭಾಗಗಳಿಗೆ ಇನ್ನೂ ಖಾಯಂ ಬೋಧಕರ ಹುದ್ದೆಗಳು ಮಂಜೂರಾಗಿರುವುದಿಲ್ಲ, ಎಲ್ಲಾ ಹೊಸ ವಿಭಾಗಗಳು ಅತಿಥಿ ಉಪನ್ಯಾಸಕರಿಂದ ನಡೆಯುತ್ತಿವೆ. ಅಧ್ಯಯನ ಮಂಡಳಿಗಾಗಿ ನಾವು ಬೆಂಗಳೂರು ವಿಶ್ವವಿದ್ಯಾಲಯ ಹಾಗೂ ರಾಜ್ಯದ ಇತರ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರ ಮೇಲೆ ಅವಲಂಬಿಸಿದ್ದೇವೆ. ಅವರು ಕೂಡ ತಮ್ಮ ವಿಶ್ವವಿದ್ಯಾಲಯದ ಕೆಲಸಕಾರ್ಯಗಳ ಮಧ್ಯ ಬಿಡುವು ಮಾಡಿಕೊಂಡು ನಮ್ಮ ವಿಶ್ವವಿದ್ಯಾಲಯದ ಶೈಕ್ಷಣಿಕ ಅಗತ್ಯಗಳಿಗೆ ಸಹಾಯ ಮಾಡುತ್ತಿದ್ದಾರೆ. ಈ ಎಲ್ಲ ಅಡೆತಡೆಗಳ ಮಧ್ಯ ಪಾಠ ಪ್ರವಚನ ಪ್ರಾರಂಭಿಸಿದ್ದೇವೆ, ಸದಸ್ಯರ ಅಭಿಪ್ರಾಯಗಳಿಗೆ ಖಂಡಿತವಾಗಿ ಗೌರವ ನೀಡಿ, ಅವರು ಸೂಚಿಸಿದಂತೆ, Scheme of Examination, ಮಾದರಿ ಪ್ರಶ್ನೆ ಪತ್ರಿಕೆ ಇತ್ಯಾದಿಗಳನ್ನು ಸಂಬಂಧಿಸಿದ ಅಧ್ಯಯನ ಮಂಡಳಿ ಅಧ್ಯಕ್ಷರಿಂದ ಪಡೆದು ಸರಿಪಡಿಸಲಾಗುವುದು ಎಂದು ತಿಳಿಸಿದರು.

**ನಿರ್ಣಯ:** **ಇಂದಿನ ಕಾರ್ಯಸೂಚಿಯಲ್ಲಿರುವ ಸರಿಸುಮಾರು ಪಠ್ಯಕ್ರಮಗಳ ಮೇಲೆ ತಿಳಸಿದ Scheme of Examination, ಮಾದರಿ ಪ್ರಶ್ನೆ ಪತ್ರಿಕೆ, ಅಂತರಿಕ ಅಂಕಗಳ ವರ್ಗೀಕರಣ ಇತ್ಯಾದಿ ವಿವರಗಳು ಪರೀಕ್ಷಾ ವಿಭಾಗಕ್ಕೆ ಅಗತ್ಯವಾಗಿರುವುದರಿಂದ, ಸಂಬಂಧಿಸಿದ ಅಧ್ಯಯನ ಮಂಡಳಿಯ ಅಧ್ಯಕ್ಷರು ಅವುಗಳನ್ನು ಕೂಡಲೇ ಒದಗಿಸಲು ಕ್ರಮ ಕೈಕೊಳ್ಳಬೇಕೆಂದು ಸೂಚಿಸಲಾಯಿತು.**

**ಮೇಲಿನ ಸೂಚನೆಗಳಿಗೆ ಒಳಪಟ್ಟು ಎಂ.ಎಸ್ಸಿ ಭೌತಶಾಸ್ತ್ರ ಪ್ರಥಮ ಹಾಗೂ ದ್ವಿತೀಯ ಸೆಮಿಸ್ಟರ್ ಪಠ್ಯಕ್ರಮವನ್ನು 2019-20 ನೇ ಸಾಲಿನಿಂದ ಜಾರಿಗೊಳಿಸಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು.**

ವಿಷಯ ಸಂಖ್ಯೆ–4 ಎಂ.ಎಸ್ಸಿ ಸಸ್ಯ ವಿಜ್ಞಾನ ಹಾಗೂ ಪ್ರಾಣಿ ವಿಜ್ಞಾನ ವ್ಯಾಸಂಗದ ಪ್ರಥಮ ಸೆಮಿಸ್ಟರ್ ಪಠ್ಯಕ್ರಮವನ್ನು 2019–20 ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಿರುವ ಕ್ರಮದ ಘಟನೋತ್ತರ ಅನುಮೋದನೆ ಕುರಿತು

ನಿರ್ಣಯ: **Scheme of Examination,** ಮಾದರಿ ಪ್ರಶ್ನೆ ಪತ್ರಿಕೆ, ಅಂತರಿಕ ಅಂಕಗಳ ವರ್ಗೀಕರಣ ಇತ್ಯಾದಿ ಕುರಿತಂತೆ, ವಿಷಯ ಸಂಖ್ಯೆ 3 ರಲ್ಲಿ ತೆಗೆದುಕೊಂಡ ತೀರ್ಮಾನಗಳಿಗೆ ಒಳಪಟ್ಟು ಎಂ.ಎಸ್ಸಿ ಸಸ್ಯ ವಿಜ್ಞಾನ ಹಾಗೂ ಪ್ರಾಣಿ ವಿಜ್ಞಾನ ವ್ಯಾಸಂಗದ ಪ್ರಥಮ ಸೆಮಿಸ್ಟರ್ ಪಠ್ಯಕ್ರಮವನ್ನು 2019–20 ನೇ ಸಾಲಿನಿಂದ ಜಾರಿಗೊಳಿಸಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು.

ವಿಷಯ ಸಂಖ್ಯೆ–5 ಎಂ.ಎ ಕನ್ನಡ ವ್ಯಾಸಂಗದ ಮೂರನೇ ಸೆಮೆಸ್ಟರ್ ಪಠ್ಯಕ್ರಮವನ್ನು 2019–20 ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಿರುವ ಕ್ರಮದ ಘಟನೋತ್ತರ ಅನುಮೋದನೆ ಕುರಿತು

ನಿರ್ಣಯ: **Scheme of Examination,** ಮಾದರಿ ಪ್ರಶ್ನೆ ಪತ್ರಿಕೆ, ಅಂತರಿಕ ಅಂಕಗಳ ವರ್ಗೀಕರಣ ಇತ್ಯಾದಿ ಕುರಿತಂತೆ, ವಿಷಯ ಸಂಖ್ಯೆ 3 ರಲ್ಲಿ ತೆಗೆದುಕೊಂಡ ತೀರ್ಮಾನಗಳಿಗೆ ಒಳಪಟ್ಟು ಎಂ.ಎ ಕನ್ನಡ ವ್ಯಾಸಂಗದ ಮೂರನೇ ಸೆಮೆಸ್ಟರ್ ಪಠ್ಯಕ್ರಮವನ್ನು 2019–20 ನೇ ಸಾಲಿನಿಂದ ಜಾರಿಗೊಳಿಸಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು.

ಕನ್ನಡ ವಿಷಯದ ಪಠ್ಯಕ್ರಮವನ್ನು ಸ್ಥೂಲವಾಗಿ ಅನುಕ್ರಮಣಿಕೆ ಪ್ರಕಾರ ಸಿದ್ದಪಡಿಸಲಾಗಿದೆ. ಆದರೆ ಅದನ್ನು ಘಟಕಗಳಲ್ಲಿ ಪರಿವರ್ತಿಸಿ ಪ್ರತಿ ಘಟಕಗಳ ಬೋಧನಾ ಅವಧಿ, ಕ್ರೆಡಿಟ್‌ಗಳನ್ನು ನಮೂದಿಸಬೇಕೆಂದು ಸೂಚಿಸಲಾಯಿತು.

ವಿಷಯ ಸಂಖ್ಯೆ–6 ಎಂ.ಎ ಆಂಗ್ಲ ವ್ಯಾಸಂಗದ ಮೂರನೇ ಸೆಮೆಸ್ಟರ್ ಪಠ್ಯಕ್ರಮವನ್ನು 2019–20 ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಿರುವ ಕ್ರಮದ ಘಟನೋತ್ತರ ಅನುಮೋದನೆ ಕುರಿತು

ನಿರ್ಣಯ: ಎಂ.ಎ ಆಂಗ್ಲ ವ್ಯಾಸಂಗದ ಮೂರನೇ ಸೆಮೆಸ್ಟರ್ ಪಠ್ಯಕ್ರಮವನ್ನು 2019–20 ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಿರುವ ಕ್ರಮದ ಘಟನೋತ್ತರ ಅನುಮೋದನೆ ನೀಡಲಾಯಿತು

ಆಂಗ್ಲ ವಿಷಯದ ಪಠ್ಯಕ್ರಮವನ್ನು ಸ್ಥೂಲವಾಗಿ ಅನುಕ್ರಮಣಿಕೆ ಪ್ರಕಾರ ಸಿದ್ದಪಡಿಸಲಾಗಿದೆ. ಆದರೆ ಅದನ್ನು ಘಟಕಗಳಲಿ ಪರಿವರ್ತಿಸಿ ಪ್ರತಿ ಘಟಕಗಳ ಬೋಧನಾ ಅವಧಿ, ಕ್ರೆಡಿಟ್‌ಗಳನ್ನು ನಮೂದಿಸಬೇಕೆಂದು ಸೂಚಿಸಲಾಯಿತು.

ಆಕರ ಪುಸ್ತಕಗಳ ಪಟ್ಟಿಯನ್ನು ನೀಡಿರುವುದಿಲ್ಲ ಅದನ್ನು ಪಠ್ಯಕ್ರಮದಲ್ಲಿ ಸೇರಿಸಬೇಕೆಂದು ಅಧ್ಯಯನ ಮಂಡಳಿಗೆ ಸೂಚಿಸಲಾಯಿತು.

ವಿಷಯ ಸಂಖ್ಯೆ–7 ಎಂ.ಎ ಇತಿಹಾಸ ವ್ಯಾಸಂಗದ 3ನೇ ಸೆಮಿಸ್ಟರ್ ಪಠ್ಯಕ್ರಮವನ್ನು 2019–20 ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಿರುವ ಕ್ರಮದ ಘಟನೋತ್ತರ ಅನುಮೋದನೆ ಕುರಿತು

ನಿರ್ಣಯ: **Scheme of Examination,** ಮಾದಿರಿ ಪ್ರಶ್ನೆ ಪತ್ರಿಕೆ, ಅಂತರಿಕ ಅಂಕಗಳ ವರ್ಗೀಕರಣ ಗಳನ್ನು ಒದಗಿಸದೇ ಇರುವ ಕುರಿತು ಸಭೆ ಪರಿಗಣಿಸಿತು. ಈ ವಿವರಗಳು ಪರೀಕ್ಷಾ ವಿಭಾಗಕ್ಕೆ ಅಗತ್ಯವಾಗಿದ್ದು, ಅಧ್ಯಯನ ಮಂಡಳಿಯ ಅಧ್ಯಕ್ಷರು ಅವುಗಳನ್ನು ಕೂಡಲೇ ಒದಗಿಸಲು ಕ್ರಮ ಕೈಕೊಳ್ಳಬೇಕೆಂದು ಸೂಚಿಸಲಾಯಿತು.

ಎಂ.ಎ ಇತಿಹಾಸ ವಿಷಯದ ಪಠ್ಯಕ್ರಮವನ್ನು ಘಟಕಗಳಲ್ಲಿ ಪರಿವರ್ತಿಸಿ ಪ್ರತಿ ಘಟಕಗಳ ಬೋಧನಾ ಅವಧಿ, ಕ್ರೆಡಿಟ್‌ಗಳನ್ನು ನಮೂದಿಸಬೇಕೆಂದು ಸೂಚಿಸಲಾಯಿತು. ಬರೀ 3ನೇ ಸೆಮಿಸ್ಟರ್ ಪಠ್ಯಕ್ರಮವನ್ನು ಸಿದ್ಧಪಡಿಸಿರುವ ಕುರಿತು ವಿದ್ಯಾವಿಷಯಕ ಪರಿಷತ್ತ್ ಆಕ್ಷೇಪಣೆ ವ್ಯಕ್ತಪಡಿಸಿ 4ನೇ ಸೆಮಿಸ್ಟರ್ ಪಠ್ಯಕ್ರಮ ಸಿದ್ಧಪಡಿಸಿ ಸಲ್ಲಿಸಲು ಅಧ್ಯಯನ ಮಂಡಳಿ ಅಧ್ಯಕ್ಷರಿಗೆ ಸೂಚಿಸಲಾಯಿತು.

ವಿಷಯ ಸಂಖ್ಯೆ-8 ಎಂ.ಎ ಅರ್ಥಶಾಸ್ತ್ರ ವ್ಯಾಸಂಗದ ಮೂರನೇ ಮತ್ತು ನಾಲ್ಕನೇ ಸೆಮಿಸ್ಟರ್‌ಗಳ ಪಠ್ಯಕ್ರಮವನ್ನು 2019-20 ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಿರುವ ಕ್ರಮದ ಘಟನೋತ್ತರ ಅನುಮೋದನೆ ಕುರಿತು

ನಿರ್ಣಯ: ಎಂ.ಎ ಅರ್ಥಶಾಸ್ತ್ರ ವ್ಯಾಸಂಗದ ಮೂರನೇ ಮತ್ತು ನಾಲ್ಕನೇ ಸೆಮಿಸ್ಟರ್‌ಗಳ ಪಠ್ಯಕ್ರಮವನ್ನು 2019-20 ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಿರುವ ಕ್ರಮದ ಘಟನೋತ್ತರ ಅನುಮೋದನೆ ನೀಡಲಾಯಿತು

ಎಂ.ಎ ಅರ್ಥಶಾಸ್ತ್ರ ವಿಷಯದ ಪಠ್ಯಕ್ರಮವನ್ನು ಘಟಕಗಳಲ್ಲಿ ಪರಿವರ್ತಿಸಿ ಪ್ರತಿ ಘಟಕಗಳ ಬೋಧನಾ ಅವಧಿ, ಕ್ರೆಡಿಟ್‌ಗಳನ್ನು ನಮೂದಿಸಬೇಕೆಂದು ಸೂಚಿಸಲಾಯಿತು.

ವಿಷಯ ಸಂಖ್ಯೆ-9 ಎಂ.ಎ ರಾಜ್ಯಶಾಸ್ತ್ರ ವ್ಯಾಸಂಗದ ಮೂರನೇ ಮತ್ತು ನಾಲ್ಕನೇ ಸೆಮಿಸ್ಟರ್‌ಗಳ ಪಠ್ಯಕ್ರಮವನ್ನು 2019-20 ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಿರುವ ಕ್ರಮದ ಘಟನೋತ್ತರ ಅನುಮೋದನೆ ಕುರಿತು

ನಿರ್ಣಯ: ಎಂ.ಎ ರಾಜ್ಯಶಾಸ್ತ್ರ ವ್ಯಾಸಂಗದ ಮೂರನೇ ಮತ್ತು ನಾಲ್ಕನೇ ಸೆಮಿಸ್ಟರ್‌ಗಳ ಪಠ್ಯಕ್ರಮವನ್ನು 2019-20 ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಿರುವ ಕ್ರಮದ ಘಟನೋತ್ತರ ಅನುಮೋದನೆ ನೀಡಲಾಯಿತು

ಎಂ.ಎ ರಾಜ್ಯಶಾಸ್ತ್ರ ವಿಷಯದ ಪಠ್ಯಕ್ರಮವನ್ನು ಘಟಕಗಳಲ್ಲಿ ಪರಿವರ್ತಿಸಿ ಪ್ರತಿ ಘಟಕಗಳ ಬೋಧನಾ ಅವಧಿ, ಕ್ರೆಡಿಟ್‌ಗಳನ್ನು ನಮೂದಿಸಬೇಕೆಂದು ಸೂಚಿಸಲಾಯಿತು.

ವಿಷಯ ಸಂಖ್ಯೆ-10 ಎಂ.ಎ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವ್ಯಾಸಂಗದ ಪ್ರಥಮ ಹಾಗೂ ದ್ವಿತೀಯ ಸೆಮಿಸ್ಟರ್‌ಗಳ ಪಠ್ಯಕ್ರಮವನ್ನು 2019-20 ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಿರುವ ಕ್ರಮದ ಘಟನೋತ್ತರ ಅನುಮೋದನೆ ಕುರಿತು

ನಿರ್ಣಯ: ಎಂ.ಎ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವ್ಯಾಸಂಗದ ಪ್ರಥಮ ಹಾಗೂ ದ್ವಿತೀಯ ಸೆಮಿಸ್ಟರ್‌ಗಳ ಪಠ್ಯಕ್ರಮವನ್ನು 2019-20 ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಿರುವ ಕ್ರಮದ ಘಟನೋತ್ತರ ಅನುಮೋದನೆ ನೀಡಲಾಯಿತು.

ವಿಷಯ ಸಂಖ್ಯೆ-11 ಬಿ.ಎ ಇತಿಹಾಸ ವ್ಯಾಸಂಗದ ಪಠ್ಯಕ್ರಮವನ್ನು 2019-20 ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಿರುವ ಕ್ರಮದ ಘಟನೋತ್ತರ ಅನುಮೋದನೆ ಕುರಿತು

ಬಿ.ಎ ಇತಿಹಾಸ ವಿಷಯದ ಪಠ್ಯಕ್ರಮವನ್ನು ಘಟಕಗಳಲ್ಲಿ ಪರಿವರ್ತಿಸಿ ಪ್ರತಿ ಘಟಕಗಳ ಬೋಧನಾ ಅವಧಿ, ಕ್ರೆಡಿಟ್‌ಗಳನ್ನು ನಮೂದಿಸಬೇಕೆಂದು ಸೂಚಿಸಲಾಯಿತು.

ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ ಆಗಮಿಸಿದ ಶ್ರೀ ಆರ್.ಕೆ. ರಮೇಶ್ ಬಾಬು ರವರು ಪಠ್ಯಕ್ರಮವನ್ನು ವಿದ್ಯಾರ್ಥಿಗಳಿಗೆ ಆಕರ್ಷಕವಾಗಿರುವ ಹಾಗೆ ಸಿದ್ಧಪಡಿಸಬೇಕೆಂದು ತಿಳಿಸಿದರು. ಸದಸ್ಯರಾದ ಡಾ. ಹರಿಪ್ರಸಾದ್ ಹಾಗೂ ಡಾ. ನರಸಿಂಹಮೂರ್ತಿಯವರು ಯು.ಜಿ.ಸಿ ಸಿದ್ಧಪಡಿಸಿದ ಮಾದರಿ ಪಠ್ಯಕ್ರಮಗಳನ್ನು ಪರಿಗಣಿಸಬಹುದೆಂದು ತಿಳಿಸಿದರು.

ಸದಸ್ಯರಾದ ಡಾ: ಇ.ಬಿ.ರಾಜೇಶ್ ಅವರು 5ನೇ ಸೆಮಿಸ್ಟರಿನ (5.2) 3ನೇ ಯುನಿಟ್‌ನಲ್ಲಿ "ವಚನ" ಮತ್ತು "ದಾಸ" ಚಳುವಳಿ ಕುರಿತು ('Cultural Revolution-Vachana Movement-Dasa Movement-Sufism") ಪತ್ರಿಕೆಯಲ್ಲಿ ವಚನ ಹಾಗೂ ದಾಸ ಸಾಹಿತ್ಯದ ವ್ಯಾಪ್ತಿ ವಿಸ್ತಾರವಾಗಿದ್ದು, ಅವುಗಳಲ್ಲಿ ವಚನಕಾರರನ್ನು ಮತ್ತು ದಾಸರ ಸಾಹಿತ್ಯವನ್ನು ನಿಗದಿಪಡಿಸವ ಬಗ್ಗೆ ಪರಿಶೀಲಿಸಲು ಅಧ್ಯಯನ ಮಂಡಳಿ ಅಧ್ಯಕ್ಷರಿಗೆ ಸೂಚಿಸಬಹುದೆಂದು ತಿಳಿಸಿದರು.

ನಿರ್ಣಯ: ಮೇಲಿನ ಅಭಿಪ್ರಾಯಗಳಿಗೆ ಒಳಪಟ್ಟು ಬಿ.ಎ ಇತಿಹಾಸ ವ್ಯಾಸಂಗದ ಪಠ್ಯಕ್ರಮವನ್ನು 2019-20 ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು.

ವಿಷಯ ಸಂಖ್ಯೆ-12 ಬಿ.ಎ ಅರ್ಥಶಾಸ್ತ್ರ ವ್ಯಾಸಂಗದ 1 ನೇ, 2 ನೇ ಹಾಗೂ 3ನೇ ಸೆಮಿಸ್ಟರ್ ಪಠ್ಯಕ್ರಮವನ್ನು 2019-20 ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಿರುವ ಕ್ರಮದ ಘಟನೋತ್ತರ ಅನುಮೋದನೆ ಕುರಿತು

ನಿರ್ಣಯ: ಬಿ.ಎ ಅರ್ಥಶಾಸ್ತ್ರ ವ್ಯಾಸಂಗದ 1 ನೇ, 2 ನೇ ಹಾಗೂ 3ನೇ ಸೆಮಿಸ್ಟರ್ ಪಠ್ಯಕ್ರಮವನ್ನು 2019-20 ನೇ ಸಾಲಿನಿಂದ ಜಾರಿಗೊಳಿಸಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು.

ಬಿ.ಎ ಅರ್ಥಶಾಸ್ತ್ರ ವಿಷಯದ ಪಠ್ಯಕ್ರಮವನ್ನು ಘಟಕಗಳಲ್ಲಿ ಪರಿವರ್ತಿಸಿ ಪ್ರತಿ ಘಟಕಗಳ ಬೋಧನಾ ಅವಧಿ, ಕ್ರೆಡಿಟ್‌ಗಳನ್ನು ನಮೂದಿಸಬೇಕೆಂದು ಸೂಚಿಸಲಾಯಿತು.

ವಿಷಯ ಸಂಖ್ಯೆ-13 2018-19 ಸಾಲಿನ ಭೂಗೋಳಶಾಸ್ತ್ರ ಸ್ನಾತಕ ಪಠ್ಯಕ್ರಮವನ್ನು 2019-20 ಶೈಕ್ಷಣಿಕ ಸಾಲಿಗೂ ಮುಂದುವರೆಸಿರುವ ಕ್ರಮದ ಘಟನೋತ್ತರ ಅನುಮೋದನೆ ಕುರಿತು

ನಿರ್ಣಯ: 2018-19 ಸಾಲಿನ ಭೂಗೋಳಶಾಸ್ತ್ರ ಸ್ನಾತಕ ಪಠ್ಯಕ್ರಮವನ್ನು 2019-20 ನೇ ಸಾಲಿಗೆ ಮುಂದುವರೆಸಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು

ವಿಷಯ ಸಂಖ್ಯೆ-14 2018-19 ಸಾಲಿನ ತೆಲುಗು ಸ್ನಾತಕ ಪಠ್ಯಕ್ರಮವನ್ನು 2019-20 ಶೈಕ್ಷಣಿಕ ಸಾಲಿಗೂ ಮುಂದುವರೆಸಿರುವ ಕ್ರಮದ ಘಟನೋತ್ತರ ಅನುಮೋದನೆ ಕುರಿತು

ನಿರ್ಣಯ: 2018-19ನೇ ಸಾಲಿನ ತೆಲುಗು ಸ್ನಾತಕ ಪಠ್ಯಕ್ರಮವನ್ನು 2019-20ನೇ ಸಾಲಿಗೆ ಮುಂದುವರೆಸಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸಂಖ್ಯೆ-15 | ಎಂ.ಬಿ.ಎ ವ್ಯಾಸಂಗದ ಪ್ರಥಮ ಹಾಗೂ ದ್ವಿತೀಯ ಸೆಮಿಸ್ಟರ್ ಮತ್ತು ಎಂ.ಬಿ.ಎ (ಸಂಜೆ) 3ನೇ ಸೆಮಿಸ್ಟರ್ : F3 Fiscal Policies & Taxation Management ಬದಲಾಗಿ **Tax Compliances and Management** ಪಠ್ಯಕ್ರಮವನ್ನು 2019-20 ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಿರುವ ಕ್ರಮದ ಘಟನೋತ್ತರ ಅನುಮೋದನೆ ಕುರಿತು |

ಸದಸ್ಯರಾದ ಪ್ರೊ. ಎಂ. ಮುನಿರಾಜು, ಡೀನರು ವಾಣಿಜ್ಯ ನಿಕಾಯ ರವರು, ಎಂ.ಬಿ.ಎ ಪಠ್ಯಕ್ರಮವನ್ನು ಡೀನರ ಪರಿಶೀಲನೆಗೆ ಕಳಿಸದಿರುವ ಕ್ರಮದ ಕುರಿತು, ತಮ್ಮ ಆಕ್ಷೇಪಣೆಯನ್ನು ವ್ಯಕ್ತಪಡಿಸಿದರು.

ಕುಲಪತಿಗಳು ವಿವರಣೆ ನೀಡಿ, ವಿಶ್ವವಿದ್ಯಾಲಯದಲ್ಲಿ ಬೋಧಕರ ಕೊರತೆಯಿಂದಾಗಿ ನಿಕಾಯಗಳನ್ನು ರಚಿಸಲು ಸಾಧ್ಯವಾಗಿರುವುದಿಲ್ಲ, ಈ ಕುರಿತು ಡೀನರುಗಳಿಗೆ ವಿಷಯ ತಜ್ಞರ ಪಟ್ಟಿ ನೀಡುವಂತೆ ಕೋರಲಾಗಿದೆ.. ನಿಕಾಯಗಳನ್ನು ರಚಿಸಿದ ನಂತರ ಅಧ್ಯಯನ ಮಂಡಳಿಯ ಶಿಫಾರಸ್ಸುಗಳನ್ನು ನಿಕಾಯದ ಪರಿಶೀಲನೆಗೆ ಒಳಪಡುತ್ತವೆ. ಈ ಕಾರಣದಿಂದ ಅಧ್ಯಯನ ಮಂಡಳಿ ಸಿದ್ಧಪಡಿಸಿದ ಪಠ್ಯಕ್ರಮಗಳನ್ನು ನೇರವಾಗಿ ವಿದ್ಯಾವಿಷಯಕ ಪರಿಷತ್ತಿನ ಸಭೆಯ ಪರಿಶೀಲನೆಗೆ ಮಂಡಿಸಲಾಗಿದೆ. ಅಗತ್ಯವಾದ ಸಂದರ್ಭಗಳಲ್ಲಿ ಡೀನರ ಅಭಿಪ್ರಾಯ ಪಡೆಯಲಾಗುವುದು ಎಂದು ತಿಳಿಸಿದರು.

ಸದಸ್ಯರಾದ ಡಾ. ಬಿ.ಎ. ಅನುರಾಧಾ ಮಾತನಾಡಿ ಅಧ್ಯಯನ ಮಂಡಳಿ ಸಿದ್ಧಪಡಿಸಿದ ಪಠ್ಯಕ್ರಮ ಸರಿಯಾಗಿದೆ ಎಂದು ತಿಳಿಸಿ ನಿಯಮಾವಳಿಗಳ ಪ್ರಕಾರ ಅಗತ್ಯವಾದಲ್ಲಿ ಡೀನರ ಅಭಿಪ್ರಾಯ ಪಡೆಯಬಹುದೆಂದು ತಿಳಿಸಿದರು. ಸದಸ್ಯರಾದ ಡಾ. ಇ.ಬಿ. ರಾಜೇಶ್ ರವರು ವಿಶ್ವವಿದ್ಯಾಲಯವು ನಿಯಮಾವಳಿಗಳಂತೆ ಕ್ರಮ ಕೈಕೊಳ್ಳಬೇಕೆಂದು ತಿಳಿಸಿದರು

| | |
|---|---|
| ನಿರ್ಣಯ: | ಎಂ.ಬಿ.ಎ ವ್ಯಾಸಂಗದ ಪ್ರಥಮ ಹಾಗೂ ದ್ವಿತೀಯ ಸೆಮಿಸ್ಟರ್ ಮತ್ತು ಎಂ.ಬಿ.ಎ (ಸಂಜೆ) 3ನೇ ಸೆಮಿಸ್ಟರ್ : **F3 Fiscal Policies & Taxation Management** ಪದಲಾಗಿ **Tax Compliances and Management** ಪಠ್ಯಕ್ರಮವನ್ನು **2019-20** ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು. |
| ವಿಷಯ ಸಂಖ್ಯೆ-16 | ಬಿ.ಕಾಂ. (ಪ್ರವಾಸೋದ್ಯಮ) ವ್ಯಾಸಂಗದ ಪಠ್ಯಕ್ರಮವನ್ನು 2019-20 ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಿರುವ ಕ್ರಮದ ಘಟನೋತ್ತರ ಅನುಮೋದನೆ ಕುರಿತು |

ಸದಸ್ಯರಾದ ಡಾ. ನರಸಿಂಹಮೂರ್ತಿಯವರು, ಪ್ರವಾಸೋದ್ಯಮ ಇತಿಹಾಸ ವಿಭಾಗಕ್ಕೆ ಸಂಬಂಧಿಸಿರುತ್ತದೆ ಎಂದು ತಿಳಿಸಿದರು. ಅಧ್ಯಯನ ಮಂಡಳಿಯ ಅಧ್ಯಕ್ಷರು, ಹಾಗೂ ವಾಣಿಜ್ಯ ನಿಕಾಯದ ಡೀನರಾದ ಡಾ. ಎಂ. ಮುನಿರಾಜು ರವರು ವಿವರಣೆ ನೀಡಿ ಈ ವ್ಯಾಸಂಗ ಕಳೆದ ಹಲವಾರು ವರ್ಷಗಳಿಂದ ಜಾರಿಯಲ್ಲಿದೆ. ಇದೇ ರೀತಿ ಸ್ನಾತಕೋತ್ತರ ಹಂತದಲ್ಲಿ ಸಹ ಪ್ರವಾಸೋದ್ಯಮಕ್ಕೆ ಸಂಬಂಧಿಸಿದ ವ್ಯಾಸಂಗಗಳನ್ನು ವಾಣಿಜ್ಯ ನಿಕಾಯದಲ್ಲಿ ಬೋಧಿಸಲಾಗುತ್ತಿದೆ ಎಂದು ತಿಳಿಸಿದರು. ಅಗತ್ಯವಾದಲ್ಲಿ ಕಲಾ ನಿಕಾಯದಲ್ಲಿ ಪ್ರವಾಸೋದ್ಯಮ ವಿಷಯ ಪ್ರಾರಂಭಿಸಬಹುದೆಂದು ತಿಳಿಸಿದರು.

| | |
|---|---|
| ನಿರ್ಣಯ: | ಬಿ.ಕಾಂ.(ಪ್ರವಾಸೋದ್ಯಮ) ವ್ಯಾಸಂಗದ ಪಠ್ಯಕ್ರಮವನ್ನು **2019-20** ನೇ ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು |

| | |
|---|---|
| ವಿಷಯ ಸಂಖ್ಯೆ–17 | ಬಿ.ಎಸ್ಸಿ ರಸಾಯನಶಾಸ್ತ್ರ ವ್ಯಾಸಂಗದ ಪಠ್ಯಕ್ರಮವನ್ನು 2020–21 ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸುವ ಕುರಿತು |

ಬಿ.ಎಸ್ಸಿ ರಸಾಯನಶಾಸ್ತ್ರ ಪಠ್ಯಕ್ರಮ ಕುರಿತು ಅಧ್ಯಯನ ಮಂಡಳಿ ಅಧ್ಯಕ್ಷರು ಹಾಗೂ ವಿಜ್ಞಾನ ನಿಕಾಯದ ಡೀನರಾದ ಡಾ. ಎಂ. ಪಾಂಡುರಂಗಪ್ಪನವರು ಸಭೆಗೆ ವಿವರಿಸಿದರು ಪಠ್ಯಕ್ರಮವನ್ನು ವಿವಿಧ ಉಪ ಸಮಿತಿಗಳು ಸಿದ್ಧಪಡಿಸಿರುತ್ತವೆ ಎಂದು ತಿಳಿಸಿದರು.

ಸದಸ್ಯರಾದ ಡಾ. ಹರಿಪ್ರಸಾದ್ ಹಾಗೂ ಡಾ. ವಿ.ಆರ್. ದೇವರಾಜ್ ಅವರು ಚರ್ಚೆಯಲ್ಲಿ ಪಾಲ್ಗೊಂಡು, ರಸಾಯನಶಾಸ್ತ್ರ ಪಠ್ಯಕ್ರಮದಲ್ಲಿ ಕೆಲವು ಮೂಲಭೂತವಾದ ಅಂಶಗಳು ಬಿಟ್ಟು ಹೋಗಿವೆ ಎಂದು ಉದಾಹರಣೆ ಸಹಿತ ವಿವರಿಸಿದರು. ಆಕರ ಗ್ರಂಥಗಳ ಪಟ್ಟಿಯಲ್ಲಿ ವಿದೇಶಿ(**Foreign**) ಲೇಖಕರ ಗ್ರಂಥಗಳನ್ನು ಸೇರಿಸಬೇಕೆಂದು ತಿಳಿಸಿದರು.

| | |
|---|---|
| ನಿರ್ಣಯ: | ಡಾ.ಪಾಂಡುರಂಗಪ್ಪನವರು ಅಧ್ಯಯನ ಮಂಡಳಿಯಲ್ಲಿ ಜರುಗಿದ ಚರ್ಚೆಗಳ ಕುರಿತು ವಿವರಿಸಿದರು. ಚರ್ಚೆಯ ನಂತರ ಪಠ್ಯಕ್ರಮವನ್ನು ರಸಾಯನಶಾಸ್ತ್ರ ಅಧ್ಯಯನ ಮಂಡಳಿಯ ಪುನರ್ ಪರಿಶೀಲನೆಗೆ ಕಳಿಸಲು ತೀರ್ಮಾನಿಸಲಾಯಿತು. ಅಧ್ಯಯನ ಮಂಡಳಿ ಸಭೆಗೆ ಡಾ. ಹರಿಪ್ರಸಾದ್ ಹಾಗೂ ಡಾ. ವಿ.ಆರ್. ದೇವರಾಜ್‌ವರನ್ನು ಆಮಂತ್ರಿಸಬೇಕೆಂದು ಸೂಚಿಸಲಾಯಿತು. |
| ಸಾಮಾನ್ಯ ಚರ್ಚೆ: 1 | ಎಲ್ಲಾ ವಿಷಯಗಳ ಪದವಿ ಹಂತರ ಪಠ್ಯಕ್ರಮಗಳನ್ನು ಪ್ರಸ್ತುತ ವಿದ್ಯಮಾನಗಳಿಗೆ ಅನ್ವಯಿಸುವ ಹಾಗೆ ಪರಿಷ್ಕರಿಸುವ ಅಗತ್ಯವಿದೆ ಇದಕ್ಕಾಗಿ ವಿಶ್ವವಿದ್ಯಾಲಯದ ಅಧ್ಯಯನ ವಿಭಾಗಗಳು ಪೂರ್ಣ ಪ್ರಮಾಣದ ಬೋಧಕರನ್ನು ಹೊಂದ ಬೇಕಾಗುತ್ತದೆ. ಸರ್ಕಾರ ಬೋಧಕ ಹುದ್ದೆಗಳಿಗೆ ಮಂಜೂರಾತಿ ನೀಡುವ ಎಲ್ಲಾ ಸಾಧ್ಯತೆಗಳು ಇದ್ದು, ಹುದ್ದೆಗಳ ಮಂಜೂರಾತಿಯಾಗಿ ನೇಮಕಾತಿ ಪ್ರಕ್ರಿಯೆ ಮುಗಿದನಂತರ ಪಠ್ಯಕ್ರಮದ ಸುಧಾರಣಾ ಕ್ರಮಗಳನ್ನು ಚುರುಕುಗೊಳಿಸಲಾಗುವುದು ಎಂದು ತಿಳಿಸಿದರು. ಪ್ರತಿ ವಿಷಯದಲ್ಲಿ ಅನುಭವಿಕರಾದ ವಿಷಯ ತಜ್ಞರ ಸಮಿತಿ ರಚಿಸಲಾಗುವದು. ಸದರಿ ಸಮಿತಿಗಳು ಮಹಾವಿದ್ಯಾಲಯದ ಶಿಕ್ಷರರೊಂದಿಗೆ ಸಂವಾದ – ಕಮ್ಮಟ ಇತ್ಯಾದಿ ಕಾರ್ಯಕ್ರಮಗಳನ್ನು ನಡೆಸಿ, ಪಠ್ಯಕ್ರಮ ಹಾಗೂ ಬೋಧನಾ ಕ್ರಮವನ್ನು ಸಿದ್ದಪಡಿಸುವಂತೆ ವಿನಂತಿಸಲಾಗುವುದು. ಇಂತಹ ಕಾರ್ಯಕ್ರಮಗಳಲ್ಲಿ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರನ್ನು ಹಾಗೂ ಸಂಬಂಧಿಸಿದ ವಿಷಯಗಳ ಶಿಕ್ಷಕರ ನಿಂಘುಗಳ ಪಧಾಧಿಕಾರಿಗಳು ಮತ್ತು ಔದ್ಯೋಗಿಕ ತಜ್ಞರನ್ನು ಆಹ್ವಾನಿಸಲಾಗುವುದು ಎಂಬ ಕುಲಪತಿಗಳ ಪ್ರಸ್ತಾವನೆಗೆ ಸಭೆ ಅನುಮೋದನೆ ನೀಡಿತು. |
| ಸಾಮಾನ್ಯ ಚರ್ಚೆ: 2 | ಸದಸ್ಯರಾದ ಸನ್ಮಾನ್ಯ ಡಾ. ಕೆ. ರಮೇಶ ರವರು ಕೆಳಕಂಡ ವಿಷಯಗಳ ಕುರಿತು ಅಧ್ಯಕ್ಷರ ಹಾಗೂ ಸಭೆಯ ಗಮನ ಸೆಳೆದರು. |

ಅ) ಶಿಕ್ಷಣ ಮಹಾವಿದ್ಯಾಲಯಗಳಿಗೆ ಸಂಬಂಧಿಸಿದ ಶೈಕ್ಷಣಿಕ ವೇಳಾ ಪಟ್ಟಿಯನ್ನು ಪ್ರಿನ್ಸಿಪಾಲರು, ಸಿಂಡಿಕೇಟ್ ಹಾಗೂ ವಿದ್ಯಾವಿಷಯಕ ಪರಿಷತ್ ಸದಸ್ಯರು ಸೇರಿ ಸಿದ್ದಪಡಿಸಿ ಕುಲಸಚಿವರಿಗೆ ಸಲ್ಲಿಸಲಾಗಿದೆ. ಅದನ್ನು ಒಬ್ಬ ನಿವೃತ್ತ ಪ್ರಿನ್ಸಿಪಾಲರ ಪರಿಶೀಲನೆಗೆ ಕಳುಹಿಸಿರುವುದು ಸರಿಯಾದ ಕ್ರಮವಲ್ಲವೆಂದು ತಿಳಿಸಿ ಇದುವರೆಗೆ ಶೈಕ್ಷಣಿಕ ವೇಳಾ ಪಟ್ಟಿ ಬಿಡುಗಡೆಯಾಗಿರುವುದಿಲ್ಲ ಈ ಕುರಿತು ಗಮನಹರಿಸಲು ಹಾಗೂ ದೂರವಾಣಿ ಕರೆಗಳನ್ನು ಸ್ವೀಕರಿಸುವ ಅಧಿಕಾರಿ/ ಸಿಬ್ಬಂದಿಗಳು ಸೌಜನ್ಯಯುತವಾಗಿ ಮಾತನಾಡಲು ಸೂಚಿಸಬೇಕೆಂದು ತಿಳಿಸಿದರು.

ಆ) ಮೌಲ್ಯಮಾಪನ ಹಾಗೂ ಇತರ ಪರೀಕ್ಷಾ ಕೆಲಸಗಳನ್ನು ನಿರ್ವಹಿಸಲು ಸಿದ್ದಪಡಿಸಿದ ಪರೀಕ್ಷಕರ ಪಟ್ಟಿಯಲ್ಲಿ ಹಲವು ಮಹಾವವಿದ್ಯಾಲಯಗಳ ಶಿಕ್ಷಕರ ಹೆಸರುಗಳು ಬಿಟ್ಟು ಹೋಗಿವೆ. ಎಲ್ಲಾ ಅರ್ಹ ಶಿಕ್ಷಕರನ್ನು ಒಳಗೊಂಡ ಪರೀಕ್ಷರ ಪಟ್ಟಿಯನ್ನು ಸಿದ್ಧಪಡಿಸಬೇಕೆಂದು ತಿಳಿಸಿದರು.

ಇ) ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಪ್ರಾಂಶುಪಾಲರ ಸಭೆಯನ್ನು ಕರೆಯಬೇಕೆಂದು ಹೇಳಿದರು.

ಈ) ಅಂಕ ಪಟ್ಟಿಗಳು ಇತ್ತೀಚಿಗೆ ಮಹಾವಿದ್ಯಾಲಯಗಳಿಗೆ ತಲುಪಿದ್ದು ಅದಕ್ಕಾಗಿ ಪರೀಕ್ಷಾ ವಿಭಾಗದ ಸಿಬ್ಬಂದಿ ಹಾಗೂ ಅಧಿಕಾರಿಗಳಿಗೆ ಅಭಿನಂದನೆ ಸಲ್ಲಿಸಿದರು

ಉ) ಮಹಾವಿದ್ಯಾಲಯಗಳು ಪ್ರತಿವರ್ಷ NCTE ಗೆ ವಿಶ್ವವಿದ್ಯಾಲಯದಿಂದ ಅನುಮೋದನೆ ಹೊಂದಿದ ಶಿಕ್ಷಕರ ಪಟ್ಟಿ ನೀಡಬೇಕಾಗುತ್ತದೆ. ಈ ಕುರಿತು ಮಹಾವಿದ್ಯಾಲಯಗಳಿಂದ ಶಿಕ್ಷಕರ ಪಟ್ಟಿಗೆ ಅನುಮೋದನೆ ಕೋರಿ ಸ್ವೀಕರಿಸಲಾದ ಮನವಿಗಳಿಗೆ ಕೂಡಲೇ ಸ್ಪಂದಿಸಿ ಅನುಮೋದನೆ ನೀಡಬೇಕೆಂದು ತಿಳಿಸಿದರು.

ಊ) ಈ ಮೊದಲು ಬೆಂಗಳೂರು ವಿಶ್ವವಿದ್ಯಾಲಯವು ಶಿಕ್ಷಣ ಮಹಾವಿದ್ಯಾಲಯಗಳಿಗೆ **Co-ordination** ಸಮಿತಿಗಳನ್ನು ರಚಿಸಿ, ಅವುಗಳು ಮಹಾವಿದ್ಯಾಲಯಗಳಿಗೆ ಭೇಟಿ ನೀಡಿ ಆಂತರಿಕ ಅಂಕಗಳನ್ನು ನೀಡಲು ಅನುಸರಿಸಿರುವ ಮಾನದಂಡ ಹಾಗೂ ದಾಖಲೆಗಳನ್ನು ಪರಿಶೀಲಸಿ ವರದಿ ನೀಡುವ ವ್ಯವಸ್ಥೆ ಇತ್ತು, ಇತ್ತಿಚಿಗೆ ಕಾರಣಾಂತರಗಳಿಂದ ನಿಂತು ಹೋಗಿದೆ. ಮಹಾವಿದ್ಯಾಲಯಗಳು ಆಂತರಿಕ ಅಂಕ ನೀಡವ ಕುರಿತು ಅನುಸರಿಸಿದ ಕ್ರಮಗಳನ್ನು ಹಾಗೂ ದಾಖಲೆಗಳನ್ನು ಪರಿಶೀಲಿಸುವ ಕ್ರಮದ ಅಗತ್ಯವಿದೆ. ಕಾರಣ **Co-ordination** ಸಮಿತಿಗಳ ಬದಲಿಗೆ **Academic Audit Committee** ರಚಿಸುವ ಕುರಿತು ಪರಿಶೀಲಿಸಿ ಕ್ರಮ ಕೈಕೊಳ್ಳಬೇಕೆಂದು ವಿನಂತಿಸಿದರು.

ಎ) ಮಹಾವಿದ್ಯಾಲಯಗಳಿಗೆ ಕಳುಹಿಸುವ ಮಾಹಿತಿ, ಪತ್ರ ಇತ್ಯಾದಿಗಳು ಕೊನೆಯ ಘಳಿಗೆಯಲ್ಲಿ ರವಾನಿಸಲಾಗುತ್ತಿದ್ದು, ಇದರಿಂದ ಅಗತ್ಯ ಸಿದ್ದತೆ ಮಾಡಿ ಕೊಳ್ಳಲು ತೊಂದರೆಯಾಗುತ್ತದೆ. ಕಾರಣ ವಿಶ್ವವಿದ್ಯಾಲಯದಿಂದ ಕಳಿಸುವ ಎಲ್ಲ ಪತ್ರ / ಮಾಹಿತಿಗಳನ್ನು ಸಾಕಷ್ಟು ಮುಂಚಿತವಾಗಿ ಕಳಿಸುವಂತೆ ಕ್ರಮವಹಿಸಬೇಕೆಂದು ತಿಳಿಸಿದರು..

ಮಾನ್ಯ ಸದಸ್ಯರು ಪ್ರಸ್ತಾಪಿಸಿದ ಅಂಶಗಳ ಕುರಿತು ಕೆಳಗಿನ ಮಾಹಿತಿ ನೀಡಲಾಯಿತು.

ಒಟ್ಟಾಗಿ ರಜೆಗಳು ಬಂದಿರುವ ಕಾರಣ ಶೈಕ್ಷಣಿಕ ವೇಳೆ ಪಟ್ಟಿಯನ್ನು ಹೊರಡಿಸುವಲ್ಲಿ ವಿಳಂಬವಾಗಿದೆ ಎಂದು ಕುಲಸಚಿವರು(ಮೌಲ್ಯಮಾಪನ) ರವರು ತಿಳಿಸಿದರು.

**Academic Audit Committee** ಅತ್ಯಂತ ಉಪಯುಕ್ತ ಸಮಿತಿಯಾಗಿದ್ದು, ಶಿಕ್ಷಣ ಮಹಾವಿದ್ಯಾಲಯಗಳಲ್ಲದೆ ಬೇರೆ ಮಹಾವಿದ್ಯಾಲಯಗಳಿಗೂ ಸಹ ಇಂತಹ ಸಮಿತಿ ರಚಿಸುವ ಕುರಿತು ಪರಿಶೀಲಿಸಲಾಗುತ್ತದೆ ಎಂದು ಕುಲಪತಿಗಳು ತಿಳಿಸಿದರು.

ಮಾನ್ಯ ಸದಸ್ಯರಾದ ಡಾ. ಕೆ.ರಮೇಶ ರವರು ಪ್ರಸ್ತಾಪಿಸಿದ ಅಂಶಗಳ ಹಾಗೂ ಇನ್ನಿತರ ವಿಷಯಗಳ ಕುರಿತು ಚರ್ಚಿಸಲು ಶಿಕ್ಷಣ ಮಹಾವಿದ್ಯಾಲಯಗಳ ಪ್ರಿನ್ಸಿಪಾಲರ ಸಭೆ ಕರೆಯಲಾಗುವುದೆಂದು ಕುಲಪತಿಗಳು ತಿಳಿಸಿದರು.

ಸಾಮಾನ್ಯ ಚರ್ಚೆ: 3 ಸದಸ್ಯರಾದ ಡಾ. ಪಾರ್ವತಿಯವರು ತ್ರಿಭಜನೆಯ ನಂತರ ಬೆಂಗಳೂರು ವಿಶ್ವವಿದ್ಯಾಲಯ ಹಾಗೂ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯಕ್ಕೆ ಪ್ರವೇಶ ಪಡೆಯಲು ವಲಸೆ ಪ್ರಮಾಣ ಪತ್ರದ ಅಗತ್ಯ ಕುರಿತು ಮಾಹಿತಿ ಕೋರಿದರು.

ನಿರ್ಣಯ: **ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ ಹೊರತು ಪಡಿಸಿ ಬೇರೆ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ಪ್ರವೇಶ ಪಡೆಯಲು ವಲಸೆ ಪ್ರಮಾಣ ಪತ್ರ ಪಡೆಯುವುದು ಕಡ್ಡಾಯವೆಂದು ಸಭೆ ತೀರ್ಮಾನಿಸಿತು.**

ಸಾಮಾನ್ಯ ಚರ್ಚೆ: 4 ಸದಸ್ಯರಾದ ಡಾ. ಕೆ. ರಮೇಶ್ ರವರು ಬೆಂಗಳೂರು ವಿಶ್ವವಿದ್ಯಾಲಯ ಸುತ್ತೋಲೆ, ಅಧಿಸೂಚನೆಗಳನ್ನು ಕೇವಲ ದಿನಾಂಕ ಬದಲಾವಣೆ ಮಾಡಿ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದಿಂದ ಜಾಲತಾಣದಲ್ಲಿ ಪ್ರಕಟ ಪಡಿಸುತ್ತಾರೆ. ಕೆಲವು ವಿಷಯಗಳು ಈ ವಿಶ್ವವಿದ್ಯಾಲಯ ಹಾಗೂ ಮಹಾವಿದ್ಯಾಲಯಗಳಿಗೆ ಅನ್ವಯವಾಗದಿದ್ದರೂ ಅವುಗಳನ್ನು ಹಾಗೆಯೇ ಉಳಿಸಿಕೊಳ್ಳಲಾಗುತ್ತದೆ. ಈ ಕುರಿತು ಅಧಿಕಾರಿಗಳು ಗಮನ ವಹಿಸಬೇಕೆಂದು ತಿಳಿಸಿದರು.

**ಅನುಭವ ಹೊಂದಿದ ಸಿಬ್ಬಂದಿಗಳ ಕೊರತೆಯಿಂದಾಗಿ ಸದಸ್ಯರು ತಿಳಿಸಿರುವ ತಪ್ಪುಗಳು ಅಗಿರುವ ಸಾಧ್ಯತೆ ಇದ್ದು ಇವುಗಳು ಮರುಕಳಿಸಲಾರದಂತೆ ಅಗತ್ಯ ಸೂಚನೆ ನೀಡಲಾಗುವುದು ಎಂದು ಕುಲಪತಿಗಳು ತಿಳಿಸಿದರು.**

ಸಾಮಾನ್ಯ ಚರ್ಚೆ: 5 ಸದಸ್ಯರಾದ ಡಾ. ಬಿ.ಎನ್. ಉಮೇಶ್ ರವರು ಮಾತನಾಡಿ ಗುಣಮಟ್ಟ ಸುಧಾರಣೆ ದೃಷ್ಟಿಯಿಂದ ಸ್ನಾತಕೋತ್ತರ ಪದವಿ ಮಟ್ಟದಲ್ಲಿ ಎರಡು ಸಂಶೋಧನಾ ಪತ್ರಿಕೆಗಳನ್ನು ಪ್ರಕಟಿಸುವುದನ್ನು ಹಾಗೂ ಒಂದು ಸಮ್ಮೇಳನ / ಸೆಮಿನಾರ್‌ಗಳಲ್ಲಿ ಭಾಗವಹಿಸುವುದು ಕಡ್ಡಾಯಗೊಳಿಸಬೇಕೆಂದು ಹೇಳಿದರು.

ಸದಸ್ಯರಾದ ಡಾ. ಹರಿಪ್ರಸಾದ್ ಮತ್ತು ಡಾ. ಮುನಿರಾಜು ರವರು ಪ್ರಸುತ್ತ 4 ನೇ ಸೆಮಿಸ್ಟರನಲ್ಲಿ Project ಸಲುವಾಗಿ ಒಂದು ಪತ್ರಿಕೆ ನಿಗದಿ ಪಡಿಸಲಾಗಿದೆ ಎಂದು ತಿಳಿಸಿದರು.

ಸದಸ್ಯರಾದ ಡಾ. ಬಿ.ಎ.ಅನುರಾಧಾ, ಡಾ. ಅನುಪಮಾ ಎಸ್.ಬಿ., ಹಾಗೂ ಡಾ. ಕೆ. ರಮೇಶ್‌ವರು ಚರ್ಚೆಯಲ್ಲಿ ಭಾಗವಹಿಸಿ, ವಿದ್ಯಾರ್ಥಿಗಳಲ್ಲಿ Communication Skill ಕೊರತೆ ಇದ್ದು ಈ ಕುರಿತು ಯೋಚಿಸಬೇಕಾಗಿದೆ ಎಂದು ತಿಳಿಸಿ ಈ ಕುರಿತು ಒಂದು ಪತ್ರಿಕೆ ಕಡ್ಡಾಯಗೊಳಿಸಿದರೆ ವಿದ್ಯಾರ್ಥಿಗಳು ಗಂಭೀರವಾಗಿ ತೆಗೆದುಕೊಳ್ಳುತ್ತಾರೆ ಎಂದು ತಿಳಿಸಿದರು.

**ಕುಲಪತಿಗಳು ಈ ಕುರಿತು ವಿವರಣೆ ನೀಡಿ ವಿದ್ಯಾರ್ಥಿಗಳಿಗೆ ಕೌಶಲ್ಯ ಅಭಿವೃದ್ಧಿಗಾಗಿ ಪ್ರಯತ್ನಿಸುವುದು ಪ್ರಸ್ತುತ ಸನ್ನಿವೇಶದಲ್ಲಿ ಅಗತ್ಯವಾಗಿದೆ ಎಂದು ತಿಳಿಸಿದರು. ವಿದ್ಯಾರ್ಥಿಗಳು ವಿವಿಧ ರಂಗಗಳಲ್ಲಿ ಉದ್ಯೋಗ ದೊರಕಿಸಿಕೊಳ್ಳಲು ಕೌಶಲ್ಯ ಹಾಗೂ ಸಂವಹನ (Communication) ಅತ್ಯಂತ ಅಗತ್ಯವಾಗಿದೆ ಎಂದು ತಿಳಿಸಿದರು. ಈ ಕುರಿತು Skill gap Analysis ಮಾಡಬೇಕಾಗಿದೆ ಎಂದು ತಿಳಿಸುತ್ತಾ, ವಿಶ್ವವಿದ್ಯಾಲಯ Centre for Advanced Studies for Professional Education and Research (CASPER) ಪ್ರಾರಂಭಿಸಲು ಯೋಜನೆ ರೂಪಿಸಿ ಪರಿನಿಯಮ ಹಾಗೂ ವಿನಿಯಮ (Statute and Regulations)ಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ**

ಸರ್ಕಾರದಿಂದ ತಾತ್ವಿಕ ಅನುಮೋದನೆ ಕೋರಲಾಗಿದೆ ಎಂದು ತಿಳಿಸಿದರು. ಈ ಕೇಂದ್ರದ ಅಡಿಯಲ್ಲಿ ಹಲವಾರು **P.G Diploma** ವ್ಯಾಸಂಗಗಳನ್ನು ಪ್ರಾರಂಭಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ ಇದು ಕಾರ್ಯರೂಪಕ್ಕೆ ಬಂದಲ್ಲಿ ವಿಶ್ವವಿದ್ಯಾಲಯದ ಹಲವಾರು ವಿದ್ಯಾರ್ಥಿಗಳ ಸಂವಹನ ಸುಧಾರಣೆ ಹಾಗೂ ಕೌಶಲ್ಯ ಅಭಿವೃದ್ಧಿ ಕುರಿತು ಕಾರ್ಯಯೋಜನೆ ರೂಪಿಸಲಾಗುವುದು ಎಂದು ತಿಳಿಸಿದರು.

**ಸಾಮಾನ್ಯ ಚರ್ಚೆ: 6**

ವಿದ್ಯಾರ್ಥಿಗಳ ಪ್ರವೇಶ ಅನುಮೋದನೆಯ ಸಂದರ್ಭದಲ್ಲಿ ಹಲವಾರು ಡಿ.ಡಿ.ಗಳನ್ನು ತರುವಂತೆ ಹೇಳುತ್ತಾರೆ ಹಾಗೆ ತಂದ ನಂತರ ಒಂದೇ ಡಿ.ಡಿ. ತೆಗೆದುಕೊಂಡು ಬರಲು ಹೇಳುತ್ತಾರೆ. ಈ ಕುರಿತು ಸ್ಪಷ್ಟತೆ ಇರಬೇಕೆಂದು ಸದಸ್ಯರಾದ ಡಾ:ಆರ್. ಪಾರ್ವತಿ ಯವರು ತಿಳಿಸಿದರು

ವಿಶ್ವವಿದ್ಯಾಲಯದಲ್ಲಿ ಸ್ವೀಕೃತವಾಗುವ ವಿವಿಧ ಶುಲ್ಕಗಳನ್ನು ಡಿ.ಡಿ.ಗಳ ರೂಪದಲ್ಲಿ ಸಲ್ಲಿಸುವ ಕುರಿತು ವಿತ್ತಾಧಿಕಾರಿಗಳು ಪರಿಶೀಲಿಸಿ ಅಗತ್ಯ ಸುಧಾರಣಾ ಕ್ರಮ ಕೈಕೊಳ್ಳಬೇಕೆಂದು ಸೂಚಿಸಲಾಯಿತು.

ಮಹಾವಿದ್ಯಾಲಯಳು ಎದುರಿಸುತ್ತಿರುವ ಸಮಸ್ಯಗಳ ಕುರಿತು ಸದಸ್ಯರಾದ ಡಾ. ರಾಜೇಶ್, ಡಾ. ಕೆ. ರಮೇಶ್, ಡಾ. ಪಾರ್ವತಿ ಹಾಗೂ ಡಿ.ಜಿ. ಶ್ರೀನಿವಾಸಮೂರ್ತಿಯವರು, ಅನೌಪಚಾರಿಕವಾಗಿ ಚರ್ಚಿಸಿ ಒಂದು ಪಟ್ಟಿಯನ್ನು ಸಿದ್ದಪಡಿಸಲು ಕುಲಪತಿಗಳು ತಿಳಿಸಿದರು. ಸದರಿ ಪಟ್ಟಿಯನ್ನು ಪ್ರಾಂಶುಪಾಲರ ಸಭೆ / ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಕೈಕೊಳ್ಳಬಹುದೆಂದು ತಿಳಿಸಿದರು.

**ಸಾಮಾನ್ಯ ಚರ್ಚೆ: 7**

ಸದಸ್ಯರಾದ ಪ್ರೊ.ಕೆ.ಎನ್ ಗೋದಾಮಣಿಯವರು ಎಲ್ಲಾ ಸದಸ್ಯರಿಗೆ ದೀಪಾವಳಿ ಹಬ್ಬದ ಶುಭಾಷಯಗಳನ್ನು ಕೊರಿ ಅಧ್ಯಕ್ಷರ ಅನುಮೋದನೆಯೊಂದಿಗೆ ಕೆಳಗಿನ ವಿಷಯಗಳನ್ನು ಸಭೆಯಲ್ಲಿ ಪ್ರಸ್ತಾಪಿಸಿದರು.

1) ಯು.ಜಿ.ಸಿ ಕ್ರೆಡಿಟ್ ಪದ್ದತಿ ಕುರಿತು ಚರ್ಚೆಆಗಿದೆ. ಕೆಲವು ವಿಷಯಗಳ ಬಗ್ಗೆ ಸ್ಪಷ್ಟತೆ ದೊರಕಿದೆ ಇನ್ನು ಕೆಲವು ವ್ಯತ್ಯಾಸಗಳನ್ನು ಪಟ್ಟಿ ಮಾಡಿ ವಿಶ್ವವಿದ್ಯಾಲಯಕ್ಕೆ ನೀಡುತ್ತೇನೆ. ಯುಜಿಸಿಯಿಂದ ನಿಗದಿಪಡಿಸಿರುವ ಕ್ರೆಡಿಟ್ ಗಳು ಎಲ್ಲಾ ವ್ಯಾಸಂಗ ಅಥವಾ ವಿಷಯಗಳಿಗೂ ಏಕರೂಪವಾಗಿರುವ ಕುರಿತು ಮಾಹಿತಿ ಕೋರಿದರು. ಮತ್ತು ಬಿ.ಕಾಂ ಕೋರ್ಸುಗೆ 120 ಕ್ರೆಡಿಟ್ ಇರಬೇಕು. ಇತರ ವಿಷಯಗಳಲ್ಲಿ ತುಂಬಾ ವೆತ್ಯಾಸವಿದೆ. ಕ್ರೆಡಿಟ್ ಕುರಿತು ಹೆಚ್ಚು ಗಮನ ಹರಿಸಬೇಕೆಂದು ತಿಳಿಸಿದರು. ಅದನ್ನೆಲ್ಲ ಪಟ್ಟಿಮಾಡಿ ಸರಿಇದೆ ಅಂದರೆ ಪರವಾಗಿಲ್ಲ ಇಲ್ಲದಿದ್ರೆ ಸ್ವಲ್ಪ ಬೋಧನಾ ಅವಧಿ ಗಳನ್ನು ಜಾಸ್ತಿ ಮಾಡಿ ಆ ಮಟ್ಟಕ್ಕೆ ತರಬೇಕೆಂದು ವಿನಂತಿಸಿದರು. ಕೆಲವು ಪ್ರತಿಷ್ಠಿತ ಕಂಪನಿಗಳು ಮತ್ತು ವಿದೇಶಿ ವಿಶ್ವವಿದ್ಯಾಲಯಗಳು ಅ ಕ್ರೆಡಿಟ್‌ಗಳಿಗೆ ತುಂಬಾ ಒತ್ತು ಕೊಡುತ್ತಾರೆ. ಅದು ನಿರೀಕ್ಷಿತ ಮಟ್ಟದ ಕ್ರೆಡಿಟ್ ಇಲ್ಲದೇ ಹೋದರೆ ವಿದ್ಯಾರ್ಥಿಗಳು ಹೆಚ್ಚಿನ ವ್ಯಾಸಂಗ ಮಾಡಿ ಕ್ರೆಡಿಟ್ ಸಂಪಾದಿಸಬೇಕಾಗುತ್ತದೆ ಹಾಗಾಗಿ ಕ್ರೆಡಿಟ್ ಪದ್ದತಿ ಬಗ್ಗೆ ಕಾಳಜಿ ವಹಿಸಬೇಕಾಗುತ್ತದೆ ಎಂದು ತಿಳಿಸಿದರು.

Credit system ಪಟ್ಟಿ ಹೀಗಿದೆ.

| subject | | credits |
|---|---|---|
| 1) B.Com(Tourism) | .. | 120 |
| 2) B.A History- | | 24 |
| 3) MBA (AICTE – 102) | .. | 106 |

4) M.A English credits ಬಗ್ಗೆ ಪ್ರಸ್ತಾಪ ಇಲ್ಲ
5) M.A History -do-
6) B.Sc Chemistry -do-
7) MA Mass Communication ..
I & II Sem .. 48

8) MA Political Science
Sem III & IV .. 40
9) M.A Economics
Sem III & IV .. 48
10)M.Sc Physics
I & II Sem .. 38
11) M.Sc Plant & Animal Science.. 24 x 4 96
12) M.A Kannada credits ಬಗ್ಗೆ ಪ್ರಸ್ತಾಪ ಇಲ
13)B.A Economics credits ಬಗ್ಗೆ ಪ್ರಸ್ತಾಪ ಇಲ
Only 3 sems

MBA ಮತ್ತು B.A History ಹೊರತುಪಡಿಸಿ ಮಿಕ್ಕ 11 subjects ಗೆ question paper pattern ಮತ್ತು IA marks split ಇರುವುದಿಲ್ಲ.

2) ವಿದ್ಯಾವಿಷಯಕ ಪರಿಷತ್ ಗೌರವಾನ್ವಿತ ಸಭೆಯಾಗಿದ್ದು, ವಿಶ್ವವಿದ್ಯಾಲಯದ ಎಲ್ಲಾ ವಿಭಾಗದ ಡೀನರು ಮತ್ತು ಪ್ರಾಧ್ಯಾಪಕರುಗಳು ವಿದ್ಯಾವಿಷಯಕ ವಿಚಾರದಲ್ಲಿ ಪ್ರತಿಭಾನ್ವಿತರಾಗಿದ್ದಾರೆ. ಅವರೆಲ್ಲ ಒಗ್ಗಟ್ಟಿನಿಂದ ಕೆಲಸ ಮಾಡಿ ವಿಶ್ವವಿದ್ಯಾಲಯವನ್ನು ಶೈಕ್ಷಣಿಕವಾಗಿ ಮೊದಲನೆ ಸ್ಥಾನಕ್ಕೆ ತರಲು ಪ್ರಯತ್ನಿಸಬೇಕೆಂದು ಕೋರಿದರು. ಇಲ್ಲಿ ಕೋಪ ಆವೇಶಗಳಿಗೆ ಆಸ್ಪದ ನೀಡದೇ ಒಗ್ಗಟ್ಟಿನಿಂದ ನಾವೆಲ್ಲ ಕಾರ್ಯನಿರ್ವಹಿಸ ಬೇಕೆಂದು ವಿನಂತಿಸಿದರು

3) ವಿದ್ಯಾವಿಷಯಕ ಪರಿಷತ್ತಿನ ಸದಸ್ಯರನ್ನು ವಿವಿಧ ಮಹಾವಿದ್ಯಾಲಯಗಳ ಆಡಳಿತ ಮಂಡಳಿಗಳಿಗೆ ಸದಸ್ಯರಾಗಿ ನೇಮಕ ಮಾಡಲಾಗಿದೆ. ತಾವು 8 ಮಹಾವಿದ್ಯಾಲಯಗಳ ಆಡಳಿತ ಮಂಡಳಿಯ ಸದಸ್ಯರಾಗಿದ್ದು, ಶೇಷಾದ್ರಿಪುರಂ ಕಾಲೇಜು ಹೊರತು ಪಡಿಸಿ, ಬೇರೆ ಯಾವ ಕಾಲೇಜಿನವರು ಸಭೆ ಕರೆದಿರುವುದಿಲ್ಲ. ಈ ಕುರಿತು ಎಲ್ಲಾ ಮಹಾ ವಿದ್ಯಾಲಯಗಳಿಗೆ ಸೂಕ್ತ ತಿಳುವಳಿಕೆ ನೀಡಬೇಕೆಂದು ಹೇಳಿದರು. ಇತರ ಸದಸ್ಯರು ಇದೇ ರೀತಿಯ ಅಭಿಪ್ರಾಯ ವ್ಯಕ್ತಪಡಿಸಿದರು

4) ಹಣಕಾಸು ಸಮಿತಿ ಸದಸ್ಯರಾಗಿ ಸಭೆಯಲ್ಲಿ ಹಲವಾರು ಯೋಜನೆಗಳ ಕುರಿತು ಚರ್ಚೆ/ ಶಿಫಾರಸ್ಸುಗಳನ್ನು ಮಾಡಲಾಗಿದೆ. ಉದಾಹರಣೆಗೆ ಕಟ್ಟಡ ದುರಸ್ತಿ, ಸೌರ ವಿದ್ಯುತ್ ಘಟಕ ಅಳವಡಿಕೆ ಇತ್ಯಾದಿಗಳ ಕುರಿತು ಕೈಕೊಂಡ ಕ್ರಮದ ವಿವರಣೆಗಳು ಲಭ್ಯವಾಗಿಲ್ಲ ಎಂದು ತಿಳಿಸಿದರು.

5) ಯು.ಜಿ.ಸಿ / ಸರ್ಕಾರದಿಂದ ಬರಬೇಕಾದ ಅನುದಾನ ಪಡೆಯಲು ಹಣಕಾಸು ಅಧಿಕಾರಿಗಳು ಪ್ರಯತ್ನ ಮಾಡಬೇಕು.

ಕುಲಪತಿಗಳು ಕೆಳಗಿನಂತೆ ವಿವರಿಸಿದರು:

1) ಮಾನ್ಯ ಸದಸ್ಯರು ಪಟ್ಟಿ ನೀಡಿದನಂತರ ಅಗತ್ಯ ಕ್ರಮ ಕೈಕೊಳ್ಳಲಾಗುವುದು.
2) ಹಣಕಾಸು ಸಮಿತಿಯ ಶಿಫಾರಸ್ಸುಗಳ. ಈ ಸಭೆಯ ಪರಿವ್ಯಾಪ್ತಿಗೆ ಬರುವುದಿಲ್ಲವೆಂದು ಹೇಳಿ ವಿವಿಧ ಕಾಮಗಾರಿಗಳ ಕುರಿತು ಕೈಕೊಂಡ ಕ್ರಮದ ಕುರಿತು ಮಾಹಿತಿ ನೀಡಿದರು.
3) ಈ ಕುರಿತು ಅಗತ್ಯ ಕ್ರಮ ಕೈಕೊಳ್ಳಲಾಗುವುದು.
4) ಮಾನ್ಯ ಸದಸ್ಯರ ಅನಿಸಿಕೆ ಹಾಗೂ ಭಾವನೆಗಳಿಗೆ ಸ್ಪಂದಿಸಿ ಸದಸ್ಯರು ಹೇಳಿದ ಶಾಂತಿ, ಸಹಬಾಳ್ವೆ ಹಾಗೂ ಒಗ್ಗಟ್ಟಿನ ಮಾತುಗಳು ಪ್ರಸ್ತುತ ಸಂಧರ್ಬಕ್ಕೆ ಉಚಿತವಾಗಿದೆ ಎಂದು ತಿಳಿಸಿ, ವಿಶ್ವವಿದ್ಯಾಲಯವು ಕೇವಲ ಭೌತಿಕ ಕಟ್ಟಡವಾಗಿರದೆ, ವಿದ್ವಾಂಸರ ಸಮುದಾಯವೆಂದು ಹೇಳಿ, ಸದಸ್ಯರ ಆಶಯದ ವಾತಾವರಣ ನಿರ್ಮಾಣಕ್ಕೆ ಪ್ರಯತ್ನಿಸಲಾಗುವುದು ಎಂದು ಕುಲಪತಿಗಳು ಹೇಳಿದರು.
5) ಎಲ್ಲಾ ಮಹಾವಿದ್ಯಾಲಗಳಿಗೆ ಕಾಲಕಾಲಕ್ಕೆ ಆಡಳಿತ ಮಂಡಳಿ ಸಭೆ ಜರುಗಿಸುವಂತೆ ಸೂಚಿಸಿ ಸುತ್ತೋಲೆ ಹೊರಡಿಸಲಾಗುವುದು.

**ಸಾಮಾನ್ಯ ಚರ್ಚೆ: 8**

ಸದಸ್ಯರಾದ ಡಾ. ಎಂ. ಪಾಂಡುರಂಗಪ್ಪನವರು, ವಿದ್ಯಾರ್ಥಿಗಳಿಗೆ ಇನ್ನು ಗುರುತಿನ ಚೀಟಿ ನೀಡಿರುವುದಿಲ್ಲವೆಂದು ತಿಳಿಸಿ ಇದರಿಂದ ಬಸ್ಸುಗಳಲ್ಲಿ ಪ್ರಯಾಣ ಮಾಡಲು ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ ಎಂದು ತಿಳಿಸಿದರು

**ಈ ಕುರಿತು ಪರಿಶೀಲಿಸಿ ಕೂಡಲೇ ಕ್ರಮ ಕೈಕೊಳ್ಳಲಾಗುವುದು ಎಂದು ಕುಲಸಚಿವರು ತಿಳಿಸಿದರು**

ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯಗೊಳಿಸಿತು.

ಸಹಿ/-
ಕುಲಸಚಿವರು

ಸಹಿ/-
ಕುಲಪತಿಗಳು

ಕುಲಸಚಿವರು. 12/11/19
ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ